# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 455 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಡಿ.ಎಸ್.ಅರುಣ್<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | : | 07-12-2023 |
| **ಉತ್ತರಿಸುವ ಸಚಿವರು** | : | ಕಾನೂನು, ನ್ಯಾಯ, ಮಾನವ ಹಕ್ಕುಗಳು,<br>ಸಂಸದೀಯ ವ್ಯವಹಾರಗಳು ಮತ್ತು<br>ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಹೊಸನಗರ ತಾಲ್ಲೂಕಿನ ಬಿದನೂರು ನಗರದಲ್ಲಿ ಕೆಳದಿ ಅರಸರ ಸ್ಮಾರಕಗಳು ಒತ್ತುವರಿಯಾಗಿದ್ದು, ಇದರಲ್ಲಿರುವ ವಿಗ್ರಹಗಳು ಕಾಣಿಯಾಗಿ ಸಂಪತ್ತು ಲೂಟಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ಹೊಸನಗರ ತಾಲ್ಲೂಕಿನ ಬಿದನೂರು ನಗರದ ಹತ್ತಿರದಲ್ಲಿರುವ ಕೆಳದಿ ಅರಸರ ಸ್ಮಾರಕಗಳು ಭಾರತೀಯ ಪುರಾತತ್ವ ಸರ್ವೇಕ್ಷಣಾ ವ್ಯಾಪ್ತಿಗೆ ಒಳಪಟ್ಟಿದ್ದು, ರಾಜ್ಯ ಪುರಾತತ್ವ ಇಲಾಖೆಯ ವಶದಲ್ಲಿ ಇರುವುದಿಲ್ಲ.<br>ಬಿದನೂರು ನಗರದ ಹತ್ತಿರ ಇರುವ ಬೈಸೆ ಗ್ರಾಮದಲ್ಲಿರುವ ಕೆಳದಿ ಅರಸರ ಸಮಾಧಿಗಳನ್ನು ರಾಜ್ಯ ಸಂರಕ್ಷಿತ ಸ್ಮಾರಕವೆಂದು ಘೋಷಿಸಲಾಗಿದೆ.<br>ಈ ಸಮಾಧಿಗಳಲ್ಲಿ ಅಪರಿಚಿತರು ನಿಧಿಯಾಸೆಗಾಗಿ ಅಗೆದಿರುವುದು ಕಂಡು ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು ; | ಈ ಕುರಿತಂತೆ ಸಹಾಯಕ ನಿರ್ದೇಶಕರು, ಸರ್ಕಾರಿ ವಸ್ತು ಸಂಗ್ರಹಾಲಯ, ಶಿವಮೊಗ್ಗ, ಇವರು ನಗರ ಪೊಲೀಸ್ ಠಾಣೆ, ನಗರ, ಹೊಸನಗರ ತಾಲ್ಲೂಕು ಇಲ್ಲಿ ದಿನಾಂಕ:15.07.2019ರಂದು ದೂರನ್ನು ದಾಖಲಿಸಿ ಈ ಬಗ್ಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ. ಪ್ರಕರಣವು ತನಿಖಾ ಹಂತದಲ್ಲಿರುತ್ತದೆ. |
| ಇ) | ಈ ಸ್ಮಾರಕಗಳ ಜೀರ್ಣೋದ್ಧಾರಕ್ಕೆ ಸರ್ಕಾರದಿಂದ ತೆಗೆದುಕೊಂಡ ಕ್ರಮವೇನು? (ವಿಸ್ತಾರ ವರದಿ ನೀಡುವುದು) | ಬಿದನೂರು ನಗರದ ಹತ್ತಿರ ಇರುವ ಬೈಸೆ ಗ್ರಾಮದಲ್ಲಿರುವ ಕೆಳದಿ ಅರಸರ ಸಮಾಧಿಗಳನ್ನು ರಾಜ್ಯ ಪುರಾತತ್ವ ಇಲಾಖೆಯವತಿಯಿಂದ 2020-21ನೇ ಸಾಲಿನಲ್ಲಿ ಸಂರಕ್ಷಣಾ ಕಾಮಗಾರಿಯನ್ನು ರೂ.26.25 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲಾಗಿದ್ದು, ಸದರಿ ಕಾಮಗಾರಿಯಲ್ಲಿ 09 ಸಮಾಧಿಗಳ ಸಂರಕ್ಷಣೆ ಮತ್ತು ಚೈನ್‌ಲಿಂಕ್ ಫೆನ್ಸಿಂಗ್ ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸಲಾಗಿದೆ. |

**ಸಂಖ್ಯೆ: TOR 211 TDV 2023**

**(ಎಚ್.ಕೆ.ಪಾಟೀಲ)**
ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ
ಪ್ರವಾಸೋದ್ಯಮ ಸಚಿವರು.